## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

ದಿನಾಂಕ **20** ನೇ ನವೆಂಬರ್ ತಿಂಗಳು **2024** ರಂದು

ಸಿ ಸಿ ನಂ**.801/2024**

ಫಿರ್ಯಾದಿಃ ಸರಕಾರ (ಹಾನಗಲ್ ಪೊಲೀಸರಿಂದ)

- ವಿರುದ್ಧ-

ಆರೋಪಿತಃ ಪರಸಪ್ಪ ಮಲ್ಲಪ್ಪ ವಾಲೀಕಾರ
ವಯಸ್ಸುಃ 43 ವರ್ಷ, ಉಃ ಚಾಲಕ
ಸಾಃ ಕಲ್ಲಹಳ್ಳಿ, ತಾಃ ಸಿಂಧಗಿ

### ದಂಡ ಪ್ರಕ್ರಿಯಾ ಸಂಹಿತೆಯ ಕಲಂ**.251** ರ ಅಡಿಯಲ್ಲಿ ಆರೋಪಣಾ ಸಾರಾಂಶ

ದಿನಾಂಕ 10.07.2023 ರಂದು ಮುಂಜಾನೆ 10.00 ಗಂಟೆಯ ಸುಮಾರಿಗೆ ಹಾನಗಲ್ ಶಹರದ ಗ್ರಾಮದೇವಿ ಪಾದಗಟ್ಟಿ ಹತ್ತಿರ ಇರುವ ಹಳೇ ಬಸ್ ನಿಲ್ದಾಣದ ಹತ್ತಿರ ತಡಸ ಗೊಂದಿ ಟಾರ್ ರಸ್ತೆಯ ಮೇಲೆ ಚಾಸಾ-4 ರವರು ನಡೆದುಕೊಂಡು ಹೋಗುತ್ತಿದ್ದಾಗ ಕೆ ಎಸ್ ಆರ್ ಟಿ ಸಿ ಬಸ್ ನಂ.ಕೆಎ-27 ಎಫ್ 0509 ನೇದ್ದನ್ನು ಅತೀ ವೇಗ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡಿ ಭಾ**.** ದಂ**.**ಸಂ**.** ಕಲಂ**. 279** ನೇದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಚಾಸಾ-4 ರವರಿಗೆ ಹಿಂದಿನಿಂದ ಡಿಕ್ಕಿಪಡಿಸಿ ಭಾರಿ ಸ್ವರೂಪದ ರಕ್ತಗಾಯಪಡಿಸಿ ಚಾಸಾ-4 ರವರ ಬಲಗಾಲು ತುಂಡಾಗುವಂತೆ ಮಾಡಿದ ಅಪರಾಧ ಭಾ**.** ದಂ**.**ಸಂ**.** ಕಲಂ**. 338** ನೇದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇದೆ.

ಮೇಲೆ ಹೇಳಿದ ಆರೋಪಣೆಗಳ ವಿಚಾರಣೆಗೆ ಒಳಪಡಲು ಈ ಮೂಲಕ ನಾನು ನಿರ್ದೇಶಿಸುತ್ತಿದ್ದೇನೆ**.**

ಪ್ರಶ್ನೆ **1 -** ಈಗ ಓದಿ ಹೇಳಲಾದ ಆರೋಪಣೆಯ ಬಗ್ಗೆ ನಿಮಗೆ ತಿಳಿಯಿತೇ **?**

ಉತ್ತರ **-**

ಪ್ರಶ್ನೆ **2 –** ಮೇಲಿನ ದೋಷಾರೋಪಣೆಗೆ ಸಂಬಂಧಪಟ್ಟಂತೆ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರಕರಣದ ವಿಚಾರಣೆಯಾಗಬೇಕೆಂದು ಬಯಸುತ್ತೀರೋ **?**

ಉತ್ತರ **-**

(ಮೇಲಿನ ಆರೋಪಣೆಯನ್ನು ಆರೋಪಿತನಿಗೆ ಗೊತ್ತಿರುವ ಭಾಷೆಯಲ್ಲಿ ಈ ದಿನ ತೆರೆದ ನ್ಯಾಯಾಲಯದಲಿ ಓದಿ ಹೇಳಿದ್ದು, ಆರೋಪಿ ನೀಡಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಹಾನಗಲ್
ದಿನಾಂಕ **20.11.2024**

**Sd/-**
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಹಾನಗಲ್